# ಬದುಕಿನ ದಾರಿಗೆ ಹೂಚೆಲ್ಲಿದವರು

ಡಾ.ಕೆ. ಅನಂತರಾಮು

ಒಂದು ಅಪೂರ್ವ ಜೀವಿತದ ಘಟನೆಗಳನ್ನು ಸರಳ ಸರಾಗ ಭಾಷೆಯಲ್ಲಿ ಓದಿದಾಗ, ರಸಭರಿತ ಹಣ್ಣೊಂದನ್ನು ತೊಟ್ಟೂ ಬಿಡದೆ ಸವಿದಂತಾಗುತ್ತದೆ. ಶ್ರೀಮಾತೆಯವರ ಪರಮಮಂಗಳ ಕಥನವನ್ನು, ಹಲವು ಪ್ರಸಂಗಗಳ ಮೂಲಕ ಸವಿಗನ್ನಡದಲ್ಲಿ, ಹೀಗೆ, ನಮಗೆ ಉಣಬಡಿಸಿರುವವರು, ನಿವೃತ್ತ ಕನ್ನಡ ಪ್ರಾಧ್ಯಾಪಕರೂ ಉತ್ತಮ ಭಾಷಣಕಾರರೂ ಎಲ್ಲಕ್ಕಿಂತ ಹೆಚ್ಚಾಗಿ ಸಹೃದಯರೂ ಆದ ಮೈಸೂರಿನ ಶ್ರೀ ಅನಂತರಾಮು ಅವರು.

**ನಾನು ನಿಮ್ಮ ಮನೆಗೆ ಬರುತ್ತೇನೆ:** ಶ್ರೀಮಾತೆ ಶಾರದಾದೇವಿಯವರ ತಾಯಿ ಶ್ಯಾಮಾಸುಂದರೀ ದೇವಿ ತನ್ನ ತವರೂರಾದ ಸಿಹೋರ್ ಗ್ರಾಮದ ಜಾತ್ರೆಗೊಮ್ಮೆ ಹೋಗಿದ್ದಾಗ, ವಿಶ್ರಾಂತಿಗಾಗಿ ಒಂದು ಬಿಲ್ವವೃಕ್ಷದ ಬುಡದಲ್ಲಿ ತನ್ನಷ್ಟಕ್ಕೆ ತಾನು ಕುಳಿತಿದ್ದರು. ಆಗಲೇ ಮಂಪರು ಕವಿದಂತಾಗಿ ರೇಷ್ಮೆ ಸೀರೆಯುಟ್ಟ ಪುಟ್ಟ ಬಾಲೆಯೊಬ್ಬಳು ಕಾಲ್ಗೆಜ್ಜೆಗಳನ್ನು ಝುಣಝುಣಿಸುತ್ತ ಬಂದು, ಆ ಪುಣ್ಯಶೀಲೆಯನ್ನು ಪ್ರೇಮದಿಂದ ಅಪ್ಪಿಕೊಂಡು, ತರುವಾಯ ಆಕೆಯ ಒಡಲೊಳಗೆ ಐಕ್ಯವಾದಂತೆ ದಿವ್ಯದರ್ಶನವೊಂದು ತೋರಿತು. ತಂದೆ ರಾಮಚಂದ್ರ ಮುಖರ್ಜಿಗೆ ಕೂಡ ಈ ಘಟನೆಯನ್ನೇ ಹೋಲುವ ಅಪೂರ್ವ ಸ್ವಪ್ನವೊಂದು ಅದೇ ಆಸುಪಾಸಿನಲ್ಲಿ ಬಿದ್ದಿತ್ತು. "ಮಗುವೆ, ನೀನು ಯಾರು?" ಎಂದು ಮುಖರ್ಜಿ ಕೇಳಿದರು. ಆ ಬಾಲಕಿ ಮಧುರ ಕಂಠದಿಂದ, **"ನಾನು ನಿಮ್ಮ ಮನೆಗೆ ಬರುತ್ತೇನೆ"** ಎಂದಷ್ಟೇ ಹೇಳಿದಳು. ನಂತರ ಪರಾಶಕ್ತಿಯೇ ಶ್ರೀಮಾತೆ ಶಾರದಾದೇವಿಯಾಗಿ ಅವತರಿಸಿ ಅವರ ಮನೆ-ಮನಗಳನ್ನು ಬೆಳಗಿಸಿದಳು.

**ನೀನು ಯಾರನ್ನು ಮದುವೆಯಾಗುತ್ತೀಯೆ?:** ಶ್ಯಾಮಾಸುಂದರೀ ದೇವಿ ತನ್ನೂರಿನ ಸಿಹೋರ್ ಜಾತ್ರೆಗೊಮ್ಮೆ ಹೋಗಿದ್ದ ಹೊತ್ತಿನಲ್ಲಿ ಬಾಲಕಿ ಶಾರದೆಯನ್ನು ಕರೆದೊಯ್ದಿದ್ದಳು. ಅಗಿನ್ನೂ ಶ್ರೀಮಾತೆಗೆ ಮೂರು ವರ್ಷ. ಪ್ರಸಂಗವಶಾತ್ ಶ್ರೀರಾಮಕೃಷ್ಣರೂ ಆ ಹೊತ್ತಿನಲ್ಲಿ ಅಲ್ಲಿಗೆ ಹೋಗಿದ್ದರು. ನಾರೀಮಣಿಯರೆಲ್ಲ ಸಂಭ್ರಮದಿಂದ ಕಲೆತು ಸರಸಸಲ್ಲಾಪಗಳಲ್ಲಿ ತೊಡಗಿದ್ದಾಗ, ಅವರುಗಳು ಶಾರದೆಯನ್ನು ಉದ್ದೇಶಿಸಿ, ಅಲ್ಲಿ ನೆರೆದಿದ್ದ ಹುಡುಗರನ್ನೆಲ್ಲ ತೋರಿಸುತ್ತ "ನೀನು ಈ ಹುಡುಗರ ಪೈಕಿ ಯಾರನ್ನು ಮದುವೆಯಾಗುತ್ತೀಯೆ?" ಎಂದು ಕೇಳಿದರು. ಆಗ ಶಾರದೆ, ಅದೇನು ಸೋಜಿಗವೋ, ಶ್ರೀರಾಮಕೃಷ್ಣರತ್ತ ಕೈತೋರಿಸಿ "ಅವರನ್ನು ಮದುವೆಯಾಗುತ್ತೇನೆ!" ಎಂದು ಹೇಳಿದಳು. ಆಗ ಹೆಂಗಳೆಯರೆಲ್ಲ ಉಲ್ಲಾಸದಿಂದ ಕಿಲಕಿಲನೆ ನಕ್ಕರು. ತನ್ನ ಅಧ್ಯಾತ್ಮ ಸಾಧನೆಯ ಪುಣ್ಯಮಾರ್ಗವನ್ನು ತೋರಿಸಿಕೊಡುವ ಪರಮಪುರುಷನನ್ನೇ ಆ ಬಾಲೆ ತೋರಿಸುತ್ತಿದ್ದಾಳೆ ಎಂಬುದನ್ನು ಆ ಮುಗ್ಧೆಯರೇನು ಬಲ್ಲರು! ಆ ಎಳವೆಯಲ್ಲಿಯೇ ಶ್ರೀಮಾತೆಯವರು ಜಗದ್ಧಾತ್ರಿಯ ಸನ್ನಿಧಾನದಲ್ಲಿ ಭಕ್ತಿಪರವಶರಾಗಿ, ಏಕಾಗ್ರಮನಸ್ಕರಾಗಿ, ಧ್ಯಾನಮಗ್ನರಾಗಿ ಅದೆಷ್ಟೋ ಹೊತ್ತು ಕುಳಿತುಬಿಡುತ್ತಿದ್ದರು. ಆ ಭಂಗಿಯನ್ನು ತದೇಕಚಿತ್ತರಾಗಿ ನೋಡುವವರ ಕಂಗಳಿಗೆ ಶ್ರೀಮಾತೆಯ ಮುಖಮಂಡಲದಲ್ಲಿ ಲೋಕೋತ್ತರವಾದ ಪ್ರಭೆಯೊಂದು ಲಾಸ್ಯವಾಡುತ್ತಿರುವುದು ಗೋಚರಿಸುತಿತ್ತು. ಅಷ್ಟು ಮಾತ್ರವಲ್ಲ, ಶ್ರೀಮಾತೆಯವರ ಮುಖಾರವಿಂದವು ದೇವಿ ಜಗದ್ಧಾತ್ರಿಯ ಪ್ರತಿಮೆಯ ಮುಖಾರವಿಂದಕ್ಕೆ ಸಮಾನವಾಗಿ ಹೊಳೆಯುತ್ತಿತ್ತು.

**ನಿಜಾನಂದದಿಂದ ವಂಚಿತರಾಗುವವರಲ್ಲ:** ಜಗನ್ಮಾತೆಯ ಲೀಲಾವಿನೋದದ ಒಂದು ಅಂಕವೋ ಎಂಬಂತೆ ಶ್ರೀಮಾತೆಯ ಕಲ್ಯಾಣವು, ಲೋಕಕಲ್ಯಾಣಾರ್ಥವಾಗಿ, ಅವರ ಐದನೆಯ ವಯಸ್ಸಿಗೇ ನಡೆದುಹೋಯಿತು; ಈ ಹಿಂದೆ ಯಾರನ್ನು ತೋರಿಸಿದ್ದರೋ ಆ ಶ್ರೀರಾಮಕೃಷ್ಣರೇ ಪತಿದೇವರಾದರು. ಶ್ರೀರಾಮಕೃಷ್ಣರೇ ನೀಡಿದ ಸೂಚನೆಯನ್ನು ಅನುಸರಿಸಿ ಅವರ ಮನೆಯವರು, ಶ್ರೀಮಾತೆಯನ್ನು ಅವರಿಗೆ ವಧುವಾಗಿ ತಂದುಕೊಂಡರು. ಶ್ರೀರಾಮಕೃಷ್ಣರಿಗಾಗ ಇಪ್ಪತ್ತಮೂರು ವರ್ಷ. ಸಂಸಾರದ ಕೋಟಲೆಗಳಲ್ಲಿ ಸಿಲುಕಿ ನವೆಯುವುದಿದ್ದರೆ ತಾನೆ ವರಸಾಮ್ಯದ ಪರೀಕ್ಷೆ! ವಿವಾಹಕಾಲದಲ್ಲೇ ಅದೆಲ್ಲ ಮಾಯಾವಿಲಾಸವೆಂಬುದು ಬಯಲಾಗಿಬಿಟ್ಟಿತು! ಮುತ್ತೈದೆಯರು ನವದಂಪತಿಗಳನ್ನು ಪ್ರದಕ್ಷಿಣೆ ಮಾಡುತ್ತ, ಇಪ್ಪತ್ತೇಳು ಬತ್ತಿಗಳ ದೀಪಾರತಿ ಬೆಳಗುತ್ತಿದ್ದಾಗ ಅಕಸ್ಮಾತ್ತಾಗಿ ಶ್ರೀರಾಮಕೃಷ್ಣರ ಕೈಗೆ ಅರಿಶಿನದಲ್ಲಿ ಅದ್ದಿ ಕಟ್ಟಿದ್ದ ಹಸಿಯ ನೂಲಿಗೆ ಉರಿ ತಗುಲಿ ಅದು ಉರಿದುಹೋಯಿತು. ಈ ದಂಪತಿಗಳು ಸಾಮಾನ್ಯರಂತೆ ವಿಷಯ ಸುಖಗಳಲ್ಲಿ ನಿಮಗ್ನರಾಗಿ ನಿಜಾನಂದದಿಂದ ವಂಚಿತರಾಗುವವರಲ್ಲ ಎಂಬುದಕ್ಕೆ ಅದು ಮುನ್ನುಡಿಯಾಗಿತ್ತು.

**ಆತ್ಮವಿದ್ಯಾಪಾರಂಗತೆ ಶ್ರೀಮಾತೆ:** ಹದಿನಾಲ್ಕನೆಯ ವಯಸ್ಸಿಗೆ ಶ್ರೀಮಾತೆಯವರು ಕೋಲ್ಕತ್ತೆಯ ದಕ್ಷಿಣೇಶ್ವರಕ್ಕೆ ಬಂದು, ಶ್ರೀರಾಮಕೃಷ್ಣರ ಸಾಮೀಪ್ಯದಲ್ಲಿ ನೆಲೆಗೊಂಡರು. ಎಳವೆಯಲ್ಲಿ ಅವರು ವ್ಯವಸ್ಥಿತವಾಗಿ ಶಾಲೆಯ ಅಕ್ಷರವಿದ್ಯೆಯನ್ನು ಕಲಿಯದಿದ್ದರೂ, ತಮ್ಮ ಪರಿಸರದ ಸಾಂಸ್ಕೃತಿಕ ಸಂಭ್ರಮದ ಸಂಪರ್ಕದಿಂದಲೇ ಬೇಕಾದಷ್ಟು ಲೋಕಜ್ಞಾನವನ್ನು ಸಂಪಾದಿಸಿಕೊಂಡಿದ್ದರು. ತಕ್ಕಷ್ಟು ಓದುಬರಹವೂ ಬರುತ್ತಿತ್ತು. ಆದರೆ ಪತಿಗೃಹಕ್ಕೆ ಬಂದಮೇಲೆ ಶ್ರೀರಾಮಕೃಷ್ಣರ ಸಾನ್ನಿಧ್ಯದಿಂದ ನಿಜವಾದ ಅರ್ಥದಲ್ಲಿ 'ಅಕ್ಷರವಿದ್ಯೆ'ಗೆ ಒಡತಿಯಾದರು. ಯಾವ ವಿದ್ಯೆಯನ್ನು ಕಲಿತರೆ ಸಕಲ ವಿದ್ಯೆಗಳನ್ನೂ ಕಲಿತಂತಾಗುತ್ತದೆಯೋ ಅದೇ ಬ್ರಹ್ಮವಿದ್ಯೆ. ಬ್ರಹ್ಮವು ಕ್ಷಯವಾಗದು. ಆದ್ದರಿಂದ ಅದು ಅಕ್ಷರ

ಎಂದು ಉಪನಿಷತ್ತುಗಳು ಬಣ್ಣಿಸುತ್ತವೆ. ಅಂತಹ ಅಕ್ಷರ ವಿದ್ಯೆಯಲ್ಲಿ, ಆತ್ಮವಿದ್ಯೆಯಲ್ಲಿ ಪಾರಂಗತೆಯಾಗಿ ಅವರು ಮೇಲೆದ್ದು ಬಂದರು; ಶ್ರೀರಾಮಕೃಷ್ಣರ ಪಟ್ಟಶಿಷ್ಯೆಯಾಗಿಬಿಟ್ಟರು.

**ಒಂದೇ ಹದಕ್ಕೆ ಶ್ರುತಿ ಮಾಡಿಟ್ಟ ವೀಣೆಗಳು:** ಸಾಂಸಾರಿಕ ವಿಷಯಭೋಗಗಳಿಂದ ವಿಮುಖರಾಗಲು ಬೇಕಾದ ವೈರಾಗ್ಯ ಬೀಜ, ಶ್ರೀಮಾತೆಯ ಹೃದಯದಲ್ಲಿ, ಶೈಶವದಲ್ಲಿಯೇ ಮೊಳಕೆಯೊಡೆದಿತ್ತು. ಅದಕ್ಕೆ ಶ್ರೀರಾಮಕೃಷ್ಣರು ನೀರುಗೊಬ್ಬರವೆರೆದು ಹೆಮ್ಮರವಾಗಿ ಬೆಳೆಸಿದರು. "ನೋಡು, ಈ ಜಗತ್ತು ಕೇವಲ ಅನಿತ್ಯ, ಕ್ಷಣಭಂಗುರ; ಈಗುಂಟು, ಮರು ಕ್ಷಣ ಇಲ್ಲ. ಇಂತಹ ಜಗತ್ತಿನ ವಿಷಯದಲ್ಲಿ ಅನಾಸಕ್ತಿ, ಭಗವಂತನ ವಿಷಯದಲ್ಲಿ ಅನುರಕ್ತಿ ಇವೇ ತುಂಬ ಮುಖ್ಯವಾದ ಅಂಶಗಳು. ಸುಮ್ಮನೆ ನರಿನಾಯಿಗಳ ತರಹ ಒಂದಷ್ಟು ಮಕ್ಕಳನ್ನು ಹಡೆದರೆ ಏನು ಬಂದ ಹಾಗಾಯಿತು? ಈ ಮಕ್ಕಳು-ಮರಿ ರಗಳೆಯೇ ಇಲ್ಲದೆ ಹೋಯಿತು ಅಂದರೆ ನಿನಗೆ ನೀನೇ ಯಜಮಾನಿ; ನೀನು ಎಂದೆಂದಿಗೂ ಸರ್ವಸ್ವತಂತ್ರಳಾಗಿರಬಹುದು" ಎಂದು ಶ್ರೀಮಾತೆಯವರಿಗೆ ಮನಬಿಚ್ಚಿ ಹೇಳಿದರು. ಶ್ರೀಮಾತೆಯವರು ಅದನ್ನು ಮನವಿಟ್ಟು ಕೇಳಿದರು; "ಹಾಗೆಯೇ ಆಗಲಿ" ಎಂದು ಅನುಮೋದಿಸಿದರು.

ಶ್ರೀಮಾತೆಯವರೂ ಶ್ರೀರಾಮಕೃಷ್ಣರೂ ಒಂದೇ ಹದಕ್ಕೆ ಶ್ರುತಿ ಮಾಡಿಟ್ಟ ಎರಡು ವೀಣೆಗಳಂತಿದ್ದರು. ಒಂದನ್ನು ಮಿಡಿದರೆ ಸಾಕು; ಮತ್ತೊಂದು ತನಗೆ ತಾನೇ ಅನಾಯಾಸವಾಗಿ ಝೇಂಕರಿಸುತ್ತಿತ್ತು. ತಮ್ಮ ತನುಮನಧನಗಳನ್ನೆಲ್ಲ ಸಂಪೂರ್ಣವಾಗಿ ಶ್ರೀರಾಮಕೃಷ್ಣರಿಗೆ ಸಮರ್ಪಿಸಿ, ಆ ಪುಣ್ಯಚೇತನವನ್ನು ತಮ್ಮ ಬಾಳದೀಪದಿಂದ ದೇದೀಪ್ಯಮಾನವಾಗಿ ಆರಾಧಿಸಿ, ತಾವೂ ಆ ಅವಿರಳ ಕಾಂತಿಯಲ್ಲಿ ಒಂದಾಗಿ ಬೆಳಗಿದರು. "ನಿನಗೆ ಸಂಸಾರದ ಅಪೇಕ್ಷೆಯಿದ್ದರೆ ಅದನ್ನು ನಾನು ಪೂರೈಸುತ್ತೇನೆ" ಎಂದು ಶ್ರೀರಾಮಕೃಷ್ಣರು ಕೇಳಿದ್ದಕ್ಕೆ ಶ್ರೀಮಾತೆಯವರು, ಅವರಿಗಿಂತ ಸಾಧನೆಯಲ್ಲಿ ಒಂದು ಹೆಜ್ಜೆ ಮುಂದೆಯೇ ಇದ್ದೇನೆ ಎಂಬುದನ್ನು ಸ್ಫುಟಗೊಳಿಸಲೋ ಎಂಬಂತೆ, "ನಾನು ನಿಮ್ಮ ಸತಿಯಾದುದು ನಿಮಗೆ ಸಹಾಯ ಮಾಡಲೆಂದೇ ಹೊರತು ನಿಮ್ಮ ದಾರಿಯನ್ನು ಬದಲಿಸುವುದಕ್ಕಲ್ಲ" ಎಂದು ನುಡಿದಾಗ ಪರಮಹಂಸರೂ ಮೂಕವಿಸ್ಮಿತರಾಗಿರಲೇಬೇಕು! "ಚಂದ್ರ ನಲ್ಲಾದರೂ ಕಲೆಗಳಿವೆ. ನನ್ನ ಮನಸ್ಸಿನಲ್ಲಿ ಮಾತ್ರ ಯಾವುದೇ ಕಲೆಗಳು ಇಲ್ಲದಂತಾಗಲಿ" ಎಂದು ಶ್ರೀಮಾತೆ ಭಗವಂತನಲ್ಲಿ ಪ್ರಾರ್ಥಿಸಿಕೊಂಡದ್ದು ಹೀಗೆ ವ್ಯರ್ಥವಾಗಲಿಲ್ಲ.

**ನಿನ್ನನ್ನು ಜಗನ್ಮಾತೆಯ ಅಂಶವೆಂದೇ ಕಾಣುತ್ತೇನೆ:** ಒಮ್ಮೆ ಶ್ರೀಮಾತೆಯವರು ಪರಮಹಂಸರನ್ನು "ನೀವು ನನ್ನನ್ನು ಹೇಗೆ ಕಾಣುತ್ತೀರಿ?" ಎಂದು ಕೇಳಿದರು. ಅದಕ್ಕೆ ಪರಮಹಂಸರು "ನಾನು ನಿನ್ನನ್ನು ಸಾಕ್ಷಾತ್ ಜಗನ್ಮಾತೆಯ ಅಂಶವೆಂದೇ ಕಾಣುತ್ತೇನೆ" ಎಂದು ಹೇಳಿದರು. ಅದಕ್ಕೆ ತಕ್ಕಂತೆ, ಒಂದು ವೈಶಾಖ ಬಹುಳ ಅಮಾವಾಸ್ಯೆ ಫಲಹಾರಿಣಿ ಕಾಳಿಕಾಪೂಜೆಯ ದಿನದಂದು, ಪರಮಹಂಸರು ಶ್ರೀಮಾತೆಯನ್ನು ಪೂಜಾಪೀಠದ ಮೇಲೆ ಕೂರಿಸಿ, ಜಗನ್ಮಾತೆಯನ್ನೇ ಅವರಲ್ಲಿ ಆವಾಹನೆ ಮಾಡಿ, ಷೋಡಶೋಪಚಾರ ಪೂಜೆಯನ್ನು ಸಾಂಗವಾಗಿ ನೆರವೇರಿಸಿದರು. ಶ್ರೀಶಾರದಾದೇವಿಯವರು ಸಾಕ್ಷಾತ್ ದೇವಿಯೇ ಆಗಿ ಆ ಪೂಜೆಯ ಪ್ರತಿಯೊಂದು ಅಂಶವನ್ನೂ ಸ್ವೀಕರಿಸಿದರು. ಪೂಜೆಯ ಸಮಯದಲ್ಲಿ ಶಾರದಾದೇವಿಯವರು ಭಾವಾವಸ್ಥೆಯಲ್ಲಿದ್ದರು. ಪೂರ್ಣಾಹುತಿಯ ಹೊತ್ತಿಗೆ ಗಾಢ ಸಮಾಧಿಸ್ಥರಾದರು.

**ಅಮ್ಮಾ, ನಾನು ನಿನ್ನ ಮಗಳು ಶಾರದೆ:** ಎಂತಹ ಕಟುಕರ ಹೃದಯವನ್ನೂ ಬೆಣ್ಣೆಯಾಗಿ ಕರಗಿಸಬಲ್ಲ ಪ್ರಭಾವಪೂರ್ಣವಾದ ದಿವ್ಯಭಾವ ಶ್ರೀಮಾತೆಯವರದಾಗಿತ್ತು. ಒಮ್ಮೆ ಶ್ರೀಮಾತೆಯವರು ಜಯರಾಂಬಾಟಿಯಿಂದ ದಕ್ಷಿಣೇಶ್ವರಕ್ಕೆ ಕಾಲ್ನಡಿಗೆಯಲ್ಲಿ ಪ್ರಯಾಣ ಮಾಡುತ್ತಿದ್ದಾಗ ಅವರ ಜೊತೆಯವರೆಲ್ಲ ವೇಗವಾಗಿ ಮುನ್ನಡೆದು, ಶ್ರೀಮಾತೆಯೊಬ್ಬರೇ ಕಾಡಿನ ಕತ್ತಲೆಯ ಏಕಾಂತದಲ್ಲಿ ಸಿಕ್ಕಿಬಿದ್ದರು. ಆಗ ಡಕಾಯಿತನೊಬ್ಬನು ಅವರಿಂದ ಎಲ್ಲವನ್ನೂ ಸುಲಿಯಲು ಎದುರಿಗೆ ನಿಂತನು. ಅವನು ತನ್ನ ಎಂದಿನ ಧಾಟಿಯಲ್ಲಿ ಗರ್ಜಿಸಿದನಾದರೂ ಶ್ರೀಮಾತೆಯವರು ವಿಚಲಿತರಾಗಲಿಲ್ಲ. ತಮ್ಮ ಅಮೃತೋಪಮ ವಾಣಿಯಿಂದ ಆ ದರೋಡೆಕೋರನನ್ನು ಉದ್ದೇಶಿಸಿ "ಅಪ್ಪಾ, ನನ್ನ ಜೊತೆಯಲ್ಲಿದ್ದವರೆಲ್ಲ ಮುಂದೆ ಮುಂದೆ ಹೋಗಿಬಿಟ್ಟರು. ನಾನು ದಾರಿತಪ್ಪಿ ಒಬ್ಬಂಟಿಗಳಾಗಿಬಿಟ್ಟೆ. ನಿನ್ನ 'ಅಳಿಯಂದಿರು' ದಕ್ಷಿಣೇಶ್ವರದ ಕಾಳೀದೇವಾಲಯದಲ್ಲಿ ವಾಸವಾಗಿದ್ದಾರೆ. ನೀನು ನನ್ನನ್ನು ಅವರ ಬಳಿಗೆ ಕರೆದುಕೊಂಡು ಹೋದರೆ, ಅವರು ನಿನ್ನನ್ನು ತುಂಬ ವಿಶ್ವಾಸದಿಂದ ನೋಡಿಕೊಳ್ಳುತ್ತಾರೆ" ಎಂದು ಕೇಳಿಕೊಂಡರು. ಅಷ್ಟರಲ್ಲಿಯೇ ಆ ಡಕಾಯಿತನ ಮಡದಿಯೂ ಅಲ್ಲಿ ಕಾಣಿಸಿಕೊಂಡಳು. ಒಡನೆಯೆ ಶ್ರೀಮಾತೆಯವರು ಆಕೆಯ ಕೈಹಿಡಿದು ವಿಶ್ವಾಸದಿಂದ "ಅಮ್ಮಾ, ನಾನು ನಿನ್ನ ಮಗಳು ಶಾರದೆ. ನನ್ನ ಜೊತೆಯವರೆಲ್ಲ ನನ್ನನ್ನು ಬಿಟ್ಟು ಮುಂದೆ ನಡೆದುದರಿಂದ ನಾನು ಈ ಭಯಂಕರ ಸ್ಥಿತಿಗೆ ಸಿಲುಕಿದೆ. ಪುಣ್ಯಕ್ಕೆ ನನ್ನ ಅದೃಷ್ಟ ಚೆನ್ನಾಗಿತ್ತು. ನೀನೂ ತಂದೆಯೂ ಬಂದುಬಿಟ್ಟಿರಿ. ಇಲ್ಲದಿದ್ದರೆ ನನ್ನ ಗತಿ ಏನಾಗುತ್ತಿತ್ತೋ?" ಎಂದು ಧೈರ್ಯದಿಂದ ಹೇಳಿದರು. ನಿಷ್ಕಲ್ಮಷ ಪ್ರೇಮದಿಂದ ಕೂಡಿದ ಈ ಮುಗ್ಧ ಮಾತುಗಳಿಂದ ಶ್ರೀಮಾತೆ, ಆ ದರೋಡೆಕೋರ ದಂಪತಿಗಳ ಪತಿತ ಹೃದಯಗಳನ್ನೂ ಗೆದ್ದುಕೊಂಡರು. "ಇವಳು ನಮ್ಮ ಮಗಳೆಂದಾದ ಮೇಲೆ ನಾವು ಕಾಪಾಡಲೇ ಬೇಕಲ್ಲವೆ" ಎಂಬ ಕರ್ತವ್ಯಭಾವದಿಂದ ಅವರು ಶ್ರೀಮಾತೆಯನ್ನು ದಕ್ಷಿಣೇಶ್ವರಕ್ಕೆ ಮುಟ್ಟಿಸಿದರು. ಅಷ್ಟು ಮಾತ್ರವಲ್ಲ, ಮುಂದೆ ಹಲವು ಬಾರಿ 'ಅಳಿಯಂದಿರ' ದರ್ಶನಕ್ಕಾಗಿ ದಕ್ಷಿಣೇಶ್ವರಕ್ಕೆ ಬರುತ್ತಿದ್ದರು.

**ಅಂಗೈಯಲ್ಲಿಟ್ಟು ಮುಂಗೈಲಿ ಮುಚ್ಚಿಕೊಂಡರು:** ಶ್ರೀರಾಮಕೃಷ್ಣರು ಶ್ರೀಮಾತೆಯವರನ್ನು ಅತ್ಯಂತ ಪ್ರೀತ್ಯಾದರಗಳಿಂದ ತಮ್ಮ ಜೀವನ

ಪರ್ಯಂತ ನಡೆಸಿಕೊಂಡರು. ಅವರಿಗೆ ಅನಾರೋಗ್ಯವೆಂದು ತಿಳಿದಾಗ ಸೂಕ್ತವಾದ ಉಪಚಾರ ಮಾಡಿದರು; ಅವರನ್ನು ಅಂಗೈಲಿಟ್ಟು ಮುಂಗೈಲಿ ಮುಚ್ಚಿಕೊಂಡು ಕಾಪಾಡಿದರು. ಶ್ರೀಮಾತೆಯವರೂ ಹಾಗೆಯೇ ಸಹಧರ್ಮಿಣಿಯಾಗಿ ಪರಮಹಂಸರ ಸೇವೆ ಮಾಡಿದರು. ಈ ಪುಣ್ಯಜೀವಿಗಳ ಸಾಧನೆ ಸಿದ್ಧಿಗಳು ಒಂದಕ್ಕೊಂದು ಹೆಣೆದುಕೊಂಡುಬಿಟ್ಟಿವೆ. ಶ್ರೀಮಾತೆಯಿಲ್ಲದ ಶ್ರೀರಾಮಕೃಷ್ಣರನ್ನಾಗಲಿ, ಶ್ರೀರಾಮಕೃಷ್ಣರಿಲ್ಲದ ಶ್ರೀಮಾತೆಯನ್ನಾಗಲಿ ನಾವು ಕಲ್ಪಿಸಿಕೊಳ್ಳುವುದೇ ಸಾಧ್ಯವಿಲ್ಲ. ಅವರಿಬ್ಬರೂ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ೧೮೮೬ರ ಆಗಸ್ಟ್ ತಿಂಗಳಲ್ಲಿ ಪರಮಹಂಸರು ಮಹಾಸಮಾಧಿಯನ್ನು ಹೊಂದಿದ ಮೇಲೆ ಶ್ರೀಮಾತೆಯವರು ಬೇಕಾದಷ್ಟು ಕಷ್ಟನಿಷ್ಠುರಗಳನ್ನು ಶಾಂತಭಾವದಿಂದಲೇ ಸಹಿಸಿದರು. ತಮ್ಮ ಬಂಧುಬಳಗದವರ, ಶಿಷ್ಯಕೋಟಿಯ ಸೇವೆಗಾಗಿ ತಮ್ಮ ಜೀವನವನ್ನು ತೇಯ್ದರು. ಶ್ರೀರಾಮಕೃಷ್ಣರು ಹೊರಿಸಿಹೋಗಿದ್ದ ಲೋಕೋದ್ಧಾರದ ಕಾರ್ಯಗಳನ್ನು ಯಥಾವತ್ತಾಗಿ ಮುನ್ನಡೆಸಿದರು. ವಿವೇಕಾನಂದರೇ ಮೊದಲಾದ ರಾಮಕೃಷ್ಣರ ನೇರಶಿಷ್ಯಕೋಟಿಗೆ ಸೂಕ್ತವಾದ ಮಾರ್ಗದರ್ಶನ ನೀಡಿ, ಪರಮಹಂಸರಿಲ್ಲವೆಂಬ ಕೊರತೆ ಮೈದೋರದಂತೆ ನೋಡಿಕೊಂಡರು.

**ಮಂತ್ರದೀಕ್ಷೆಯಿಂದ ಪುನೀತಗೊಳಿಸಿದರು:** ಶ್ರೀರಾಮಕೃಷ್ಣರು ನೀಡುತ್ತಿದ್ದ ಮಂತ್ರದೀಕ್ಷೆಯ ಮಹಾಕಾರ್ಯವನ್ನು, ಶ್ರೀಮಾತೆಯವರು ಭಕ್ತರ ಉದ್ಧಾರಕ್ಕಾಗಿ ಮುಂದುವರಿಸಿದರು. ಅಖಂಡವಾದ ತಪಸ್ಸಿನಲ್ಲಿ ತಮ್ಮನ್ನು ಸವೆಸಿಕೊಂಡು, ಆ ಪುಣ್ಯಫಲವನ್ನೆಲ್ಲ ಶಿಷ್ಯಕೋಟಿಯ ಹಿತಕ್ಕಾಗಿ ಧಾರೆಯೆರೆದರು. ಶ್ರೀರಾಮಕೃಷ್ಣರು ಯಾರನ್ನಾದರೂ ಸ್ವೀಕರಿಸುವಾಗ ಚೆನ್ನಾಗಿ ಪರೀಕ್ಷಿಸಿ, ವಿವೇಚಿಸಿ ಮುಂದುವರಿಯುತ್ತಿದ್ದರು. ಆದರೆ ಶ್ರೀಮಾತೆಯವರದು ಅವ್ಯಾಜವಾದ ಮಾತೃವಾತ್ಸಲ್ಯ. "ಶರಣಾದೆ ತಾಯೆ, ಕಾಪಾಡು" ಎಂದರೆ ಸಾಕು, ಹಿಂದುಮುಂದು ನೋಡದೆ ಅವರನ್ನು ತಮ್ಮ ಉಡಿಗೆ ತುಂಬಿಕೊಂಡುಬಿಡುತ್ತಿದ್ದರು. ಯಾರೂ ಅರಗಿಸಿಕೊಳ್ಳಲಾಗದ ಭಕ್ತರ ಪಾಪವನ್ನು ತಾವು ಅರಗಿಸಿಕೊಂಡುಬಿಡುತ್ತಿದ್ದರು. ತಮ್ಮ ದೇಹಕ್ಕಾಗುವ ನೋವು, ಬಾಧೆಗಳನ್ನು ಲೆಕ್ಕಿಸುತ್ತಿರಲಿಲ್ಲ. ಜಾತಿಮತಗಳ ಭೇದವೆಣಿಸದೆ ಭಕ್ತರಿಗೆ ಊಟವಿಕ್ಕಿ ಅವರ ಎಂಜಲನ್ನು ತಾವೇ ಬಳಿಯುತ್ತಿದ್ದರು. ಯಾರಾದರೂ ಆಕ್ಷೇಪಿಸಿದರೆ, "ನೋಡಿ, ನಾನು ಅವರೆಲ್ಲರ ತಾಯಿ. ಮಕ್ಕಳಿಗಾಗಿ ತಾಯಿ ಇದನ್ನೆಲ್ಲ ಮಾಡದೆ ಹೋದರೆ ಇನ್ನಾರು ಮಾಡಬೇಕು?" ಎಂದು ಹಾರ್ದಿಕವಾಗಿ ಹೇಳುತ್ತಿದ್ದರು. ಶ್ರೀಮಾತೆಯವರು ಭಾರತದ ಪುಣ್ಯತೀರ್ಥಗಳನ್ನು ಸಂದರ್ಶಿಸಿ ತಮ್ಮ ಚಿತ್ತವನ್ನು ಅರಳಿಸಿಕೊಂಡರು. ದಕ್ಷಿಣದೇಶದ ಯಾತ್ರಾಕಾಲದಲ್ಲಿ ಕರ್ನಾಟಕದ ರಾಜಧಾನಿಯಾದ ಬೆಂಗಳೂರು ಮಹಾನಗರದ ಆಶ್ರಮಕ್ಕೂ ಬಂದು, ಅದನ್ನು ತಮ್ಮ ಪಾದಸ್ಪರ್ಶದಿಂದ ಪುನೀತಗೊಳಿಸಿದರು.

ಹೀಗೆ ಶ್ರೀಮಾತೆಯವರ ಆಧ್ಯಾತ್ಮಿಕ ವ್ಯಕ್ತಿತ್ವ ಮಹೋನ್ನತವಾದುದು. ಅದರ ಆಳ ಅಗಲಗಳನ್ನು ಇಂತಿಷ್ಟೇ ಸರಿಯೆಂದು ಅಳತೆಮಾಡಿ ಹೇಳುವುದು ಸಾಧ್ಯವಿಲ್ಲ. ಸಾಟಿಯಿಲ್ಲದೆ ಬೆಳದುನಿಂತ ಅವರು, ಭಾರತೀಯ ಸ್ತ್ರೀಶಕ್ತಿಯ ಪರಿಪೂರ್ಣರೂಪರಾಗಿ ನಮಗೆ ಕಾಣಬರುತ್ತಾರೆ. ಅವರು ಯಾವ ಉಪನ್ಯಾಸಗಳನ್ನೂ ನೀಡಲಿಲ್ಲ, ಪುಸ್ತಕಗಳನ್ನು ಬರೆಯಲಿಲ್ಲ, ತಮ್ಮ ಶಕ್ತಿ ವಿಶೇಷಗಳನ್ನು ಜನರ ಮುಂದೆ ಪ್ರದರ್ಶಿಸಲಿಲ್ಲ. ಸಾಮಾನ್ಯರಲ್ಲಿ ಸಾಮಾನ್ಯರೆಂಬಂತೆ ನಡೆದುಕೊಂಡರು; ತಮ್ಮ ಸಾಧನೆಯ ಮಾರ್ಗದಲ್ಲಿ ಮುಂದುವರೆಯುತ್ತ ಇತರರ ಆಧ್ಯಾತ್ಮಿಕ ದಾರಿಗೂ ಹೂಚೆಲ್ಲುತ್ತ ಬದುಕಿ, ೨೧.೭.೧೯೨೦ ರಂದು ಮಹಾಸಮಾಧಿಯನ್ನು ಹೊಂದಿದರು.

**ಶಾರದಾ ಎಂಬ ಶಬ್ದಕ್ಕೆ ಅದೆಷ್ಟೋ ಅರ್ಥಗಳಿವೆ:** ಶಾರದಾ ಎಂಬ ಪದಕ್ಕೆ ಸಕಲ ವಿದ್ಯಾಭಿಮಾನಿ ಬ್ರಹ್ಮದೇವನ ರಾಣಿ ಎಂಬರ್ಥವಲ್ಲದೆ ನಿರ್ಮಲವಾದ, ಶುಭ್ರವಾದ, ನವೀನವಾದ ಎಂಬೆಲ್ಲ ಅರ್ಥಗಳಿವೆ. ಯಾವ ಅರ್ಥವನ್ನು ಸ್ವೀಕರಿಸಿದರೂ ಸರಿಯೆ, ಅವೆಲ್ಲವೂ ಶ್ರೀಮಾತೆಯನ್ನು ಮುಂದಿಟ್ಟುಕೊಂಡೇ ಹೇಳಿದ ಹಾಗಿದೆ. "ಶ್ರೀರಾಮಕೃಷ್ಣರ ಘನತೆಯ ಬಗೆಗಾದರೂ ನಮಗೊಂದಿಷ್ಟು ಇಣುಕುನೋಟ ದೊರೆಯಬಹುದು; ಆದರೆ ಶ್ರೀಮಾತೆಯವರ ಬಗೆಗೆ ಏನನ್ನು ತಿಳಿದುಕೊಳ್ಳುವುದಕ್ಕೂ ನಮ್ಮಿಂದ ಸಾಧ್ಯವಿಲ್ಲ. ಅವರು ಮಾಯೆಯ ಮುಸುಕನ್ನು ತಮ್ಮ ಮೇಲೆ ಎಷ್ಟು ದಟ್ಟವಾಗಿ ಹಾಕಿಕೊಂಡಿದ್ದಾರೆಂದರೆ, ಅದನ್ನು ಭೇದಿಸಿ ಅವರ ದೊಡ್ಡತನವನ್ನು ಕಾಣುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ" ಎಂದು ಶ್ರೀಮಾತೆಯ ಅತಿಪ್ರೀತಿಪಾತ್ರ ಸೇವಕರಾದ ಸ್ವಾಮಿ ಶಾರದಾನಂದರು ಹೇಳಿದ್ದಾರೆ.

**ಶ್ರೀಮಾತೆಯವರ ಕೃಪೆ ನನ್ನ ಪಾಲಿಗೆ ಅಮೂಲ್ಯ:** ಸ್ವಾಮಿ ವಿವೇಕಾನಂದರು ತಮ್ಮ ಸೋದರಸಂನ್ಯಾಸಿಗಳಾದ ಸ್ವಾಮಿ ಶಿವಾನಂದರಿಗೆ ಬರೆದ ಪತ್ರವೊಂದರಲ್ಲಿ ಶ್ರೀಮಾತೆಯವರ ಮಹೋನ್ನತಿಯನ್ನು ಅರಿಯುವುದು ಕಠಿಣವೆಂಬುದನ್ನು ಒತ್ತಿ ಹೇಳುತ್ತ, ಆ ಜಗನ್ಮಾತೆಯ ಕೃಪಾಶೀರ್ವಾದಗಳಿಗಾಗಿ ಹಂಬಲಿಸಿದ್ದಾರೆ. ಸ್ವಾಮಿ ವಿವೇಕಾನಂದರು ಒಂದು ಪತ್ರದಲ್ಲಿ ಹೀಗೆ ಬರೆದಿದ್ದಾರೆ: "ಶ್ರೀಮಾತೆಯವರ ಜೀವನದ ಮಹತ್ವವನ್ನು ನಿಮ್ಮಲ್ಲಿ ಇನ್ನೂ ಯಾರೂ ಅರ್ಥಮಾಡಿಕೊಂಡಿಲ್ಲ. ಆದರೆ ಕಾಲಕ್ರಮದಲ್ಲಿ ನೀವು ಅದನ್ನು ಅರಿಯುವಿರಿ. ಆದ್ಯಾಶಕ್ತಿಯ ಅನುಗ್ರಹವಿಲ್ಲದೆ ಜಗತ್ತಿಗೆ ಉದ್ಧಾರವಿಲ್ಲ. ಶ್ರೀಮಾತೆಯವರ ಕೃಪೆ ನನ್ನ ಪಾಲಿಗೆ ಶ್ರೀರಾಮಕೃಷ್ಣರ ಕೃಪೆಗಿಂತಲೂ ನೂರುಪಟ್ಟು, ಸಾವಿರಪಟ್ಟು ಅಮೂಲ್ಯ. ಶ್ರೀರಾಮಕೃಷ್ಣರ ವಿಚಾರದಲ್ಲಿ ನೀನು ಅವರನ್ನು ದೇವರೆಂದಾದರೂ ಕರೆ, ಮನುಷ್ಯನೆಂದಾದರೂ ಕರೆ, ಅಥವಾ ಇನ್ನೇನು ಬೇಕಾದರೂ ಕರೆದುಕೊ. ಆದರೆ ಶಾರದಾದೇವಿಯವರನ್ನು ಯಾರು ಸಾಕ್ಷಾತ್ ಜಗನ್ಮಾತೆಯೆಂದು ಒಪ್ಪಿ ಗೌರವಿಸುವುದಿಲ್ಲವೋ ಅವನಿಗೆ ಧಿಕ್ಕಾರವಿರಲಿ."